ಪ್ರತಿಬಿಂಬ
PRATIBIMBA – Multidisciplinary Kannada Research Journal of IIMRD
ISSN: 2582-2284
Vol-2 Issue 6, MAY-JUNE 2021, 65-71
©IIMRD, Mysuru
www.iimrd.com

# ಕನ್ನಡ ಸಾಹಿತ್ಯಕ್ಕೆ ಡಾ. ಹಜರತಅಲಿ ಇ ತಿಮ್ಮಾಪೂರರವರ ಕೊಡುಗೆ

ಡಾ. ಎಂ.ಆರ್.ದೊಡಮನಿ*

**ಪೀಠಿಕೆ**

"ಕಲೆ, ಮನುಷ್ಯನ ಜೊತೆ ಜೊತೆಯಲ್ಲಿಯೇ ಬೆಳೆದು ಬಂದುದು. ನೈಸರ್ಗಿಕ ಪ್ರಕ್ರಿಯೆಗಳು ಭಯ–ಭಕ್ತಿ ದೈವತ್ವದ ಕಲ್ಪನೆಗೆ ಎಡೆಮಾಡಿಕೊಟ್ಟಿದ್ದರೆ, ಆದಿಮಾನವನ ಆ ದೈವ ಪರಿಕಲ್ಪನೆಯೇ ಆತನ ಎಲ್ಲ ಕಲೆ ಹಾಗೂ ಸಾಹಿತ್ಯಗಳಿಗೂ ಮೂಲಮಾತೃಕೆಯಾಗಿದೆ. ದೈವದ ಬಗೆಗಿನ ಚಿಂತನೆ ಸಾಹಿತ್ಯ ಸೃಷ್ಟಿಗೆ ಕಾರಣವಾಗಿದ್ದರೆ, ದೈವದ ಮುಂದೆ ಹಾಡಿ ಕುಣಿದು ಸಂಗೀತ–ನೃತ್ಯಗಳಿಗೆ, ದೈವಕ್ಕೆ ಕಟ್ಟಿದ ಆವಾಸ, ಮಾಡಿದ ಅಲಂಕಾರಗಳು ಶಿಲ್ಪ–ಚಿತ್ರ ಕಲೆಗಳಿಗೆ ಕಾರಣವಾದವು."[1] ಹೀಗೆ ಕಲೆ ಮತ್ತು ಸಾಹಿತ್ಯದ ಅವಿನಾಭಾವ ಸಂಬಂಧವು ಜೊತೆಜೊತೆಯಲ್ಲಿ ಬೆಳೆದುಕೊಂಡು ಬಂದಿವೆ.

ಸಾಹಿತ್ಯ ನಿಂತ ನೀರಲ್ಲ, ಅದು ನಿರಂತರವಾಗಿ ಬದಲಾವಣೆಗೆ ಒಗ್ಗಿಕೊಂಡು ತನ್ನದೇ ಪ್ರಭಾವ ಕಹಳೆಯನ್ನು ಊದುತ್ತಾ ಸಾಗುತ್ತದೆ. ಸಾಹಿತ್ಯ ಎಂದಾಗ ಮಾನವನ ಹುಟ್ಟಿನಿಂದ ಸಾವಿನವರೆಗೂ ತನ್ನ ಜೀವಿತ ಅವಧಿಯಲ್ಲಿ ತಾನು ಕಂಡ ಅನುಭವ, ಅದಕ್ಕೆ ಪ್ರತ್ಯುತ್ತರವಾಗಿ ಅಭಿವ್ಯಕ್ತಿಯೊಂದಿಗೆ ಸಾಗುವ ಜೀವನ ಪಯಣದ ಒಟ್ಟು ಮೊತ್ತವಾಗಿದೆ. ಒಟ್ಟಿನಲ್ಲಿ ಅನುಭವಗಳ ಕಲಾತ್ಮಕ ಅಭಿವ್ಯಕ್ತಿಯೇ ಸಾಹಿತ್ಯ. ಇಂತಹ ನಮ್ಮ ಕನ್ನಡ ಸಾಹಿತ್ಯಕ್ಕೆ ಎರಡು ಸಾವಿರ ವರ್ಷಗಳ ಇತಿಹಾಸವನ್ನು ಹೊಂದಿದೆ. ಬೆಳಗಾವಿ ಜಿಲ್ಲೆಯ ಕನ್ನಡ ಸಾಹಿತ್ಯ ಪರಂಪರೆಗೆ ಶ್ರೀಮಂತ ಕಾಣಿಕೆಗಳನ್ನು ಕೊಟ್ಟ ಸೃಜನಶೀಲ ಸಾಹಿತಿ ಮತ್ತು ಶ್ರೇಷ್ಠ ಕಲಾವಿದರು ಆದ ಡಾ. ಹಜರತಅಲಿ ಇ. ತಿಮ್ಮಾಪೂರರವರ ಸಾಹಿತ್ಯವು ವಿಶೇಷವಾದುದು.

ಡಾ. ಹಜರತಅಲಿ ಇ. ತಿಮ್ಮಾಪೂರರವರ ಸಾಹಿತ್ಯದ ಹಲವು ಬಗೆಯ ಕಾವ್ಯ, ನಾಟಕ, ಕತೆ, ಕಾದಂಬರಿ ಮುಂತಾದವುಗಳನ್ನು ರಚಿಸಿ ಉತ್ಕೃಷ್ಟವಾದ ಸಾಹಿತ್ಯದ ಕೃಷಿಯನ್ನು ಮಾಡಿ, ಸಾಹಿತ್ಯ ಪರಂಪರೆಯನ್ನು ಮುಂದುವರೆಸುತ್ತಿದ್ದಾರೆ. "ದಿನಪತ್ರಿಕೆಗಳಲ್ಲಿ ಅಪಘಾತ, ಅಪಹರಣ, ದರೋಡೆ, ಕೊಲೆ, ಸುಲಿಗೆ, ಕೋಮುಗಲಭೆ, ಸ್ಮಾರಕ ನಾಶ ಮೊದಲಾದ ಸಂಗತಿಗಳು ಕಾಣಿಸಿಕೊಳ್ಳುತ್ತವೆ. ರಾಮರಾಜ್ಯದ ಕನಸು ಕಮರಿಹೋಗುತ್ತಿವೆ".[2] ಇಂತಹ ಸಾಮಾಜಿಕ ಕಳಕಳಿಯನ್ನು ಇಟ್ಟುಕೊಂಡು

---

** ಕನ್ನಡ ಸಹಾಯಕ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸವದತ್ತಿ.*

[1] ಹಸನಬಿ ಬೀಳಗಿ. ಜಾನಪದ ಸೃಷ್ಟಿ–ದೃಷ್ಟಿ, , ಪು.ಸಂ.1
[2] ತಿಮ್ಮಪೂರ. ಎಚ್. ಆಯ್., ಪ್ರತಿಭಟನೆ. ಪು.ಸಂ.112

ಸಾಹಿತ್ಯ ರಚನೆಯಲ್ಲಿ ತಮ್ಮದೇ ಛಾಪು ಮೂಡಿಸಿದವರಲ್ಲಿ ಡಾ.ತಿಮ್ಮಾಪೂರ ಕೂಡ ಒಬ್ಬರು. ಸರಳ, ಸಜ್ಜನಿಕೆಯ ಡಾ.ತಿಮ್ಮಾಪೂರ ವೃತ್ತಿಯ ಜೊತೆಗೆ ಸಾಹಿತ್ಯ ಕೃಷಿಯನ್ನು ಮಾಡುತ್ತಾ ಬರುತ್ತಿದ್ದಾರೆ.

ಡಾ.ತಿಮ್ಮಾಪೂರರವರು 'ವೀಣೆ' ಎಂಬ ಸಂಪಾದನಾ ಕೃತಿಯನ್ನು 1993 ರಲ್ಲಿ ಹೊರತಂದಿದ್ದಾರೆ. ಇದು 'ಮೋಹನ ವಿಜಯಲಕ್ಷ್ಮಿ ಆರ್ಟ ಪ್ರಿಂಟರ್ಸ' ಶೇರಿಗಲ್ಲಿ, ಬೆಳಗಾವಿಯಿಂದ ಮುದ್ರಣಗೊಂಡಿದೆ. "ಜನ ನನ್ನನ್ನು ನೋಡಿ ನಕ್ಕಿದೆ; ಇಂದಿಗೂ ನಗುತ್ತಿದೆ. ನನ್ನನ್ನು ನೋಡಿ ವ್ಯಂಗ್ಯವಾಗಿ ನಕ್ಕಾಗಲೇ ಅವರ ಮನಸ್ಸಿಗೆ ಸಮಾಧಾನ. ಅವರ ನಗುವನ್ನು ಕುರಿತು ಆಲೋಚಿಸಿದಾಗೆಲ್ಲ ಆ ನಗುವಿಗೂ ಒಂದು ಅರ್ಥವಿದ್ದಿರಬೇಕೆಂದು ಅನಿಸುತ್ತದೆ"[3] ಇಂತಹ ನೇರ ದಿಟ್ಟತನದ ವ್ಯಕಿತ್ವವುಳ್ಳ ಸಾಹಿತ್ಯದ ಎಲ್ಲಾ ಪ್ರಕಾರಗಳಲ್ಲಿ ತಮ್ಮನ್ನು ತೊಡಗಿಸಿಕೊಂಡ ಶ್ರೀ ಬಾಳೇಶ ಲಕ್ಷೆಟ್ಟಿರವರ ಅಭಿನಂದನ ಗ್ರಂಥ ಇದಾಗಿದೆ. ಡಾ. ತಿಮ್ಮಾಪೂರು ಅವರು ಈ ಕೃತಿಯ ಮೊದಲು ಭಾಗದಲ್ಲಿ 'ಬದುಕು' ಲಕ್ಷೆಟ್ಟಿರವರ ಕುರಿತಾದ ಹಿರಿಯ ಗಣ್ಯವ್ಯಕ್ತಿಗಳ ಅನಿಸಿಕೆಗಳನ್ನು ಕ್ರೂಢೀಕರಿಸಿ ಹೇಳಿದ್ದಾರೆ. ಎರಡನೆಯ ಭಾಗದಲ್ಲಿ ಲಕ್ಷೆಟ್ಟಿರವರ ಕಾವ್ಯ, ಕಥೆ, ಕಾದಂಬರಿ, ವ್ಯಕ್ತಿಚಿತ್ರ, ಜೀವನ ಚರಿತ್ರೆ, ಸಮಾಜ ಚಿತ್ರ, ಮಕ್ಕಳ ಸಾಹಿತ್ಯ, ಅಂಕಣ–ಸಂಪಾದನೆ–ಪತ್ರ ಮತ್ತು ಬಾಳೇಶರವರ ಕವಿತೆಗಳಲ್ಲಿ ಮೂಡಿ ಬಂದ ಸಿಹಿ–ಕಹಿ ನೆನಪುಗಳನ್ನು ಬಿಚ್ಚಿಟ್ಟಿದ್ದಾರೆ. ಹಾಗೇ ಅವರು ಎದುರಿಸಿದ ನೋವು ಮತ್ತು ಸಾಮಾಜಿಕ ಕಳಕಳಿಯ ಒತ್ತಾಸೆಗಳನ್ನು ಸೃಜನಶೀಲ ಲೇಖಕರಾದ ಡಾ. ತಿಮ್ಮಾಪೂರರವರು ಇಲ್ಲಿ ಅಚ್ಚುಕಟ್ಟಾಗಿ ಎಳೆಎಳೆಯಾಗಿ ಹೆಣದಿದ್ದಾರೆ.

ಇದರ ನಂತರ ಡಾ. ತಿಮ್ಮಾಪೂರರವರು 1999ರಲ್ಲಿ 'ಹನಿಗಂಪು' ಎಂಬ ಚುಟುಕು ಸಾಹಿತ್ಯ ಸಂಕಲನವನ್ನು ಸಂಪಾದನೆ ಮಾಡಿಕೊಟ್ಟಿದ್ದಾರೆ. ಇದು 'ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ತು' ಬೆಳಗಾವಿಯಿಂದ ಮುದ್ರಣಗೊಂಡಿದೆ. ಈ ಸಂಪಾದನಾ ಕೃತಿಯಲ್ಲಿ ಒಟ್ಟು ಒಂದುನೂರಾ ಇಪ್ಪತ್ತೆರಡು ಚುಟುಕು ಪದ್ಯಗಳಿವೆ. ಈ ಕೃತಿಯ ಕುರಿತು ಎಂ.ಎ.ಸನದಿಯವರು ಬೆನ್ನುಡಿಯಲ್ಲಿ ಹೇಳುವಂತೆ "ಇಲ್ಲಿ ಹಾಸ್ಯದ ಹೊನಲಿದೆ, ಪ್ರೀತಿ–ಪ್ರೇಮದ ಕಾರಂಜಿಯಿದೆ. ಸಮಕಾಲೀನ ಬದುಕಿನ ವಿವಿಧ ಸನ್ನಿವೇಶಗಳ ಬಗೆಗಿನ ವಿಡಂಬನೆಯಿದೆ. ವ್ಯಂಗ್ಯವಿದೆ, ಭ್ರಷ್ಟ ರಾಜಕಾರಣಿಗಳನ್ನು ಕಲಾತ್ಮಕವಾಗಿ ಛೇಡಿಸುವ ಎಚ್ಚರಿಕೆಯಿದೆ. ಭಾವೈಕ್ಯತೆಯನ್ನು ಬಿಂಬಿಸುವ, ಕನ್ನಡಾಭಿಮಾನವನ್ನು ಜಾಗೃತಗೊಳಿಸುವ ಕಾಳಜಿಯಿದೆ. ಹಗರಣಗಳ ಬಗೆಗೆ ಆಕ್ರೋಶವೂ ಇದೆ. ಸಮಾಜದ ಓರೆ–ಕೋರೆಗಳನ್ನು ಕಟುಕುವ ಚುಟುಕುಗಳೂ ಗಮನ ಸೆಳಯುತ್ತವೆ. ಒಟ್ಟಾರೆ ಬದುಕಿನ 'ವಿಕಟ ವಾಸ್ತವಿಕತೆ'ಯನ್ನು 'ಹನಿಗಂಪು' ಸೊಗಸಾಗಿ ತೆರೆದಿಡುವ ಮೂಲಕ ಹನಿ ಹನಿಯಾಗಿ ಕಂಪು ಸೂಸುತ್ತಿದೆ." ಇಂದಕ್ಕೊಂದು ಉದಾಹರಣೆಯನ್ನು ನೋಡುವುದಾದರೆ, ಶ್ರೀ

[3] ತಿಮ್ಮಪೂರ. ಎಚ್. ಆಯ್. (ಸಂ.). ವೀಣೆ. ಪು.ಸಂ.10

ಎಸ್.ಆರ್.ಪಾಟೀಲರವರ 'ಭ್ರಷ್ಟತೆ' ಚುಟುಕಿನಲ್ಲಿ ಇಂದಿನ ಸಮಾಜಲ್ಲಿ ಬಹುದೊಡ್ಡ ಸಮಸ್ಯೆಯಾದ ಭ್ರಷ್ಟಾಚಾರದ ಕರಾಳತೆಯನ್ನು ಬಿಂಬಿಸುತ್ತದೆ.

*"ಸಾಕಿದ ನಾಯಿಗೆ*
*ಸಾಕಷ್ಟು ಸವಿಗೂಳನಿಕ್ಕಿದ್ದರೂ*
*ಸಂಧಿಯಲಿ ಸಂಚರಿಸಿ*
*ಹೊಲಸನರಸಿ ತಿನ್ನುವಂತೆ*
*ತುಂಬ ಸಂಬಳ ಪಡೆದರೂ*
*ಸೊರಗ್ಯಾಡುವ ಚಟ"*[4]

ಒಟ್ಟಿನಲ್ಲಿ ಚುಟುಕು ಸಾಹಿತ್ಯ ಇಂದಿನ ಬಸವಳಿದ ಸಮಾಜವನ್ನು ಆರೋಗ್ಯಕರ ರೀತಿಯಲ್ಲಿ ಸಾಗುವಂತೆ ಮಾಡುತ್ತಿದೆ. ಇಂತಹ ಬೆಳವಣಿಗೆಯ ಕೆಲಸವನ್ನು 'ಹನಿಗಂಪು' ಚುಟುಕು ಸಂಕಲನವು ಯಶಸ್ವಿಯಾಗುವಂತೆ ಮಾಡುವಲ್ಲಿ ಡಾ. ತಿಮ್ಮಾಪೂರರವರ ಶ್ರಮ ಸಾರ್ಥಕವಾಗಿದೆ.

ಡಾ. ತಿಮ್ಮಾಪೂರ ಅವರು ಸಂಪಾದನೆ ಮಾಡಿರುವ ಮತ್ತೊಂದು ಕೃತಿ 'ಜ್ಞಾನ ಜ್ಯೋತಿ'. ಈ ಕೃತಿಯು ಪ್ರೊ. ಆರ್.ಎನ್. ಜಾಧವರವರ ಅಭಿನಂದನ ಗ್ರಂಥವಾಗಿದೆ. ಇದು 'ಇಪ್ರೆಶನ್ಸ್ ಬಿ–2, ಅಕ್ಷರ ಆರ್ಕೇಡ' ಬೆಳಗಾವಿಯಿಂದ 2000ರಲ್ಲಿ ಮುದ್ರಣಗೊಂಡಿದೆ. ಡಾ.ತಿಮ್ಮಾಪೂರರವರು ಮೊದಲ ಭಾಗದಲ್ಲಿ ಪ್ರೊ. ಆರ್.ಎನ್. ಜಾಧವ ಇವರ ಕುರಿತಾದ ಗಣ್ಯರ ಶುಭ ಸಂದೇಶಗಳನ್ನು ಕೊಟ್ಟಿದ್ದಾರೆ. ಎರಡನೆಯ ಭಾಗದಲ್ಲಿ ಜಾಧವರವರಿಗೆ ದೊರೆತ ಸನ್ಮಾನ ಮತ್ತು ಗೌರವ ಪತ್ರಗಳ ಮಾಹಿತಿಯನ್ನು ನೀಡಿದ್ದಾರೆ. ಮೂರನೆಯ ಭಾಗದಲ್ಲಿ ಜಾಧವರವರ ಕತೃತ್ವ ಹಾಗೂ ವ್ಯಕಿತ್ವದ ಮಹತ್ವವನ್ನು ಬಿಚ್ಚಿಟ್ಟಿದ್ದಾರೆ. ನಾಲ್ಕನೆಯ ಭಾಗದಲ್ಲಿ ಜಾಧವರವರ ಕನ್ನಡ ಲೇಖನಗಳನ್ನು ನೀಡಿದ್ದಾರೆ. ಐದನೆಯ ಭಾಗದಲ್ಲಿ ಜಾಧವರವರ ಮರಾಠಿ ಮತ್ತು ಹಿಂದಿ ಕವಿತೆ ಮತ್ತು ಲೇಖನಗಳ ಬಗ್ಗೆ ಬೆಳಕು ಚೆಲ್ಲಿದ್ದಾರೆ. ಅಲ್ಲದೇ ಇಂಗ್ಲೀಷ್ ಕವಿತೆ, ಲೇಖನಗಳು, ಶೈಕ್ಷಣಿಕ ಕನ್ನಡ ಂತ್ತು ಇಂಗ್ಲೀಷ್ ಲೇಖನಗಳನ್ನು ನೀಡಿದ್ದಾರೆ. ಒಟ್ಟಿನಲ್ಲಿ 'ಜ್ಞಾನ ಜ್ಯೋತಿ' ಅಭಿನಂದನ ಗ್ರಂಥವು ಒಬ್ಬ ಸೃಜನಶೀಲ ಲೇಖಕನಿಗೆ ಸಮರ್ಪಿಸಿದ ಪ್ರೀತಿಪೂರ್ವಕ ನಮನವಾಗಿದೆ.

ಬೆಂಗಳೂರಿನ ಜ್ಞಾನೋದಯ ಪ್ರಕಾಶನದವರು 2001ರಲ್ಲಿ ಡಾ. ತಿಮ್ಮಾಪೂರರವರ 'ಮುತ್ತು ಕಿತ್ತವರು' ಕಥಾ ಸಂಕಲನವನ್ನು ಮತ್ತು ಹೃದಯತಂತಿ ಎಂಬ ಕವನ ಸಂಕಲವನ್ನು ಪ್ರಕಟಿಸಿದ್ದಾರೆ. 'ಮುತ್ತು ಕಿತ್ತವರು' ಕಥಾ ಸಂಕಲನಕ್ಕೆ ಬೆನ್ನುಡಿ ಬರೆದಿರುವ ಡಾ. ಎಂ.ಜಿ.ಹೆಗಡೆಯವರು 'ಮುತ್ತು ಕಿತ್ತವರು' ಕಥಾಸಂಕಲನದಲ್ಲಿರುವ ಎಲ್ಲ ಕಥೆಗಳಲ್ಲಿ ವಸ್ತು ವೈವಿಧ್ಯವಿದೆ. ಸುತ್ತಲಿನ ಜೀವನ

[4] ತಿಮ್ಮಪೂರ. ಎಚ್. ಆಯ್. (ಸಂ.)., ಹನಿಗಂಪು. ಪು.ಸಂ.119

ಪ್ರಪಂಚವನ್ನು ತಾವು ಕಂಡಂತೆ ಚಿತ್ರಿಸಿದ್ದಾರೆ. ಸಮಾಜ ಜೀವನದ ಸಮಸ್ಯೆಗಳನ್ನು ತಮ್ಮ ಕಥೆಗಳಿಗೆ ವಸ್ತುವಾಗಿಸಿಕೊಂಡು ತಮ್ಮ ಸಂವೇದನೆಗಳನ್ನು ಕಥೆಗಳಲ್ಲಿ ಅಳವಡಿಸಿಕೊಳ್ಳಲು ಪ್ರಾಮಾಣಿಕ ಪ್ರಯತ್ನ ಮಾಡಿದ್ದಾರೆ. ಬಡ ಜನರು ಅನುಭವಿಸುತ್ತಿರುವ ಯಾತನೆಗಳು, ಸಾಮಾಜಿಕ ಕಳಕಳಿ ಹಾಗೂ ಯುವಜನಾಂಗದ ವಿವಿಧ ಸಮಸ್ಯೆಗಳು ಈ ಕಥೆಗಾರರನ್ನು ಬಹುವಾಗಿ ಕಾಡಿವೆ" ಎಂದು ಹೇಳಿದ್ದಾರೆ. ಈ ಕಥಾಸಂಕಲನದಲ್ಲಿ ಪ್ರೀತಿ–ಪ್ರೇಮದ ಮುಂದೆ ಬಡವ–ಶ್ರೀಮಂತ ಎಂಬ ಬೇಧಭಾವ ಕಾಣುವುದಿಲ್ಲ, ಬದಲಾಗಿ ಪ್ರೀತಿ–ಪ್ರೇಮವು ಒಂದು ಗೆಲುವಿನ ಶಕ್ತಿಯ ಪ್ರತೀಕವಾಗಿ ಡಾ. ತಿಮ್ಮಾಪೂರರವರು ತಮ್ಮ ಕಥೆಗಳಲ್ಲಿ ತೋರಿಸಿಕೊಟ್ಟಿದ್ದಾರೆ.

'ಹೃದಯದ ತಂತಿ' ಕವನ ಸಂಕಲನದಲ್ಲಿ ಒಟ್ಟು ನಲವತ್ತೆಂಟು ಕವನಗಳಿವೆ. ಬುದ್ದಣ್ಣ ಹಿಂಗಮಿರೆ ಅವರು ಬೆನ್ನುಡಿಯಲ್ಲಿ ಹೇಳುವಂತೆ "ಜೋಗುಳ, ಬಳೇಗಾರ, ಹದ್ದುಗಳು, ಪ್ರಶಸ್ತಿಗಳು, ಗುಂಗು, ಶೋಷಣೆ, ನೆನಪಾಗದಿರು, ಸಿಡಿಯಿರಿ ಈ ಮುಂತಾದವುಗಳಲ್ಲಿ ಅವರ ವೈಯಕ್ತಿಕ ಅನಿಸಿಕೆಗಳು ವ್ಯಕ್ತವಾಗಿದೆ. ಮತ್ತು ಬೋಳುಮರ ಕವಿತೆಯು ತಿಮ್ಮಾಪೂರ ಅವರಲ್ಲಿ ಹುದುಗಿರುವ ಕಾವ್ಯಶಕ್ತಿಯನ್ನು ಹೊರಗೆಡವುತ್ತದೆ. ಪದ್ಯದ ಉದ್ದಕ್ಕೂ ತಿಮ್ಮಾಪೂರ ಅವರ ಮನಸ್ಸು ವ್ಯಾಪಕವಾಗಿದ್ದು ಇನ್ನು ಮುಂದೆ ಅವರು ಒಳ್ಳೆಯ ಕಾವ್ಯ ರಚಿಸುವುದಕ್ಕೆ ಸಾಕ್ಷಿಯೊದಗಿಸುತ್ತದೆ. 'ಹೃದಯ ತಂತಿ'ಯಲ್ಲಿ ಪ್ರಗತಿಪರ ಧೋರಣೆ ವ್ಯಕ್ತವಾಗಿದೆ. ಸಮಕಾಲೀನ ಕೂಲಿಕಾರ್ಮಿಕರ, ಬಡಜನರ, ನೋವು ಕಷ್ಟ ನಷ್ಟಗಳು ಅಭಿವ್ಯಕ್ತವಾಗಿದ್ದು ರೋಷ ವೇದನೆಯನ್ನು ಪ್ರಕಟಿಸುತ್ತಾರೆ." ಅದನ್ನು 'ಹದ್ದುಗಳು' ಎಂಬ ಪದ್ಯದಲ್ಲಿ ನೋಡಬಹುದು.

***"ಭಾರತ ತುಂಬೆಲ್ಲ***
***ಹಗಲುರಾತ್ರಿ ಹಾರಾಡುತ್ತಿವೆ***
***ಹದ್ದುಗಳು***
***ಅವುಗಳಿಗೂ ಗೊತ್ತು***
***ಹೋದಲ್ಲೆಲ್ಲ ಸಿಗುತ್ತವೆ***
***ಹೆಣಗಳು"***[5]

ಭಾರತ ದೇಶದ ಪ್ರಜಾಪ್ರಭುತ್ವ ವ್ಯವಸ್ಥೆಯ ಕರಾಳ ಚಿತ್ರಣವನ್ನು ಕಣ್ಮುಂದೆ ಕಟ್ಟುವಂತೆ ಈ ಪದ್ಯದ ಮೂಲಕ ಡಾ. ತಿಮ್ಮಾಪೂರರವರು ಇಲ್ಲಿ ತೋರಿಸಿಕೊಟ್ಟಿದ್ದಾರೆ.

ಕರ್ನಾಟಕ ವಿಶ್ವವಿದ್ಯಾಲಯದ ಪ್ರಸಾರಾಂಗವು 1999ರಲ್ಲಲಿ ಹೊರತಂದಿರುವ 'ಸಣ್ಣಾಟಗಳು' ಎಂಬ ಚಿಕ್ಕ ಕೃತಿಯಲ್ಲಿ ಜನಪದ ರಂಗಭೂಮಿಯ ಉಗಮ ಮತ್ತು ವಿಕಾಸ, ಉತ್ತರ ಕರ್ನಾಟಕದ

[5] ತಿಮ್ಮಪೂರ. ಎಚ್. ಆಯ್. (ಸಂ.)., ಹೃದಯ ತಂತಿ. ಪು.ಸಂ.43

ರಂಗಕಲೆಗಳು ಮತ್ತು ಸಣ್ಣಾಟದ ಹುಟ್ಟು, ಬೆಳವಣಿಗೆ, ಸಣ್ಣಾಟದ ಕಥೆಗಳು, ರಂಗಪ್ರಯೋಗ ಮತ್ತು ಸಣ್ಣಾಟಗಳಲ್ಲಿ ಮೌಲ್ಯ ಪ್ರಸಾರವನ್ನು ಚೊಕ್ಕದಾಗಿ ದಾಖಲಿಸಿಕೊಟ್ಟಿದ್ದಾರೆ.

2005ರಲ್ಲಿ ಮಲ್ಲಾಡಿಹಳ್ಳಿಯ 'ಸೂರ್ಯಪ್ರಕಾಶನ' ಹೊರತಂದಿರುವ 'ಬಯಲಾಟ ಕಥೆಗಳು: ಸಾಂಸ್ಕೃತಿಕ ಅಧ್ಯಯನ' ಕೃತಿಯ ಪ್ರಮುಖವಾದುದಾಗಿದೆ. ಈ ಕೃತಿಯು ಡಾ. ತಿಮ್ಮಾಪೂರ ಅವರ ಸಂಶೋಧನಾ ಕೃತಿಯಾಗಿದ್ದು, ಅವರ ಸಂಶೋಧನಾ ಮಹಾಪ್ರಬಂಧವಾಗಿದೆ. ಕೃತಿಯ ಮುಖಪುಟದಲ್ಲಿರುವ ಬಯಲಾಟ ವೇಷಭೂಷಣ ಚಿತ್ರವು ಓದುಗರು ಮತ್ತು ಸಂಶೋಧಕರನ್ನು ಆಕರ್ಷಿಸುತ್ತದೆ. ಈ ಕೃತಿಗೆ ಮುನ್ನುಡಿ ಬರೆದಿರುವ ಡಾ. ಕೆ. ಆರ್. ದುರ್ಗಾದಾಸ್‌ರವರು ಈ ಮಹಾಪ್ರಬಂಧದ ಮಾರ್ಗದರ್ಶಕರು ಕೂಡಾ ಆಗಿದ್ದಾರೆ. ಜಾನಪದ ರಂಗಭೂಮಿಯ ಹಲವು ಪ್ರಕಾರಗಳಲ್ಲಿ ಬಯಲಾಟದ ಮಹತ್ವ ಮತ್ತು ಅದು ಕೊಡುವ ಮೌಲ್ಯಗಳು ಸಂಸ್ಕೃತಿಯ ಪ್ರತಿಬಿಂಬವಾಗಿ ನಿಲ್ಲುತ್ತವೆಂಬುದನ್ನು ಸಂಶೋಧನೆ ಮೂಲಕ ತೋರಿಸಿಕೊಟ್ಟಿದ್ದಾರೆ.

ಈ ಮಹಾಪ್ರಬಂಧವು ಒಂಭತ್ತು ಅಧ್ಯಾಯನಗಳನ್ನೊಳಗೊಂಡಿವೆ. ಮೊದಲ ಅಧ್ಯಾಯದಲ್ಲಿ ಉದ್ದೇಶ ಮತ್ತು ಸ್ವರೂಪದ ಕುರಿತು ಚರ್ಚಿಸಿದ್ದಾರೆ. ಎರಡನೆಯ ಅಧ್ಯಾಯದಲ್ಲಿ ಸಂಸ್ಕೃತಿ ಪರ ವಿವೇಚನೆಯನ್ನು ಸಾಂದರ್ಭಿಕ ಟಿಪ್ಪಣಿಗಳ ಮೂಲಕ ಹೇಳಿದ್ದಾರೆ. ನಂತರ ಜನಪದ ಮತ್ತು ಶಿಷ್ಟಪದಗಳ ಬಗ್ಗೆ ಹೇಳಿದ್ದಾರೆ. ಅಧ್ಯಾಯ ಮೂರರಲ್ಲಿ ಜನಪದ ರಂಗಭೂಮಿಯ ಉಗಮ ಮತ್ತು ವಿಕಾಸ ಕುರಿತು ಚರ್ಚಿಸಿದ್ದಾರೆ. ಅಧ್ಯಾಯ ನಾಲ್ಕರಲ್ಲಿ ಬಯಲಾಟ ಕತೆಗಳ ಪ್ರಾಚೀನತೆಯ ಸ್ಥೂಲವಾದ ಪರಿಚಯವನ್ನು ನೀಡಿದ್ದಾರೆ. ಅಧ್ಯಾಯ ಐದರಲ್ಲಿ ಬಯಲಾಟ ಕತೆಗಳ ಆಕರ ಸ್ವರೂಪ ಮತ್ತು ವರ್ಗೀಕರಣವನ್ನು ವಿಸ್ತಾರವಾಗಿ ಚರ್ಚಿಸಿದ್ದಾರೆ. ಅಧ್ಯಾಯ ಆರರಲ್ಲಿ ಬಯಲಾಟ ಕತೆಗಳಲ್ಲಿ ಮೂಡಿಬಂದ ಸಾಮಾಜಿಕ ಜೀವನಸ್ತರಗಳನ್ನು ವಿವರಿಸಿದ್ದಾರೆ. ಅಧ್ಯಾಯ ಏಳರಲ್ಲಿ ಕೌಟುಂಬಿಕ ಜೀವನವನ್ನು ಹುಡುಕಿ ತೋರಿಸಿದ್ದಾರೆ. ಅಧ್ಯಾಯ ಎಂಟರಲ್ಲಿ ಕತೆಗಳಲ್ಲಿ ನಂಬಿಕೆ ಸಂಪ್ರದಾಯ ಆಚರಣೆಗಳ ಬಗ್ಗೆ ವಿವರಿಸಿದ್ದಾರೆ. ಅಧ್ಯಾಯ ಒಂಭತ್ತರಲ್ಲಿ ಕತೆಗಳಲ್ಲಿ ಭಾಷೆ ಕುರಿತು ಚರ್ಚಿಸಿದ್ದಾರೆ. ಮುಂದೆ ಸಮಾರೊಪ ಮತ್ತು ಅನುಬಂಧಗಳು ನೀಡಿದ್ದಾರೆ. ಒಟ್ಟಿನಲ್ಲಿ ಇದು ಡಾ. ತಿಮ್ಮಾಪೂರರವರ ಮಹತ್ವದ ಕೃತಿಯಾಗಿದೆ.

ನಿರಂತರ (ಬಾಳೇಶ ಲಕ್ಷೆಟ್ಟಿ ಕಾವ್ಯ ಸಂಪುಟ) ಕೃತಿಯನ್ನು ಬೆಳಗಾವಿಯ 'ಹಸಿರು ಕ್ರಾಂತಿ ಪ್ರಕಾಶನ'ದವರು 2005ರಲ್ಲಿ ಹೊರತಂದಿದ್ದಾರೆ. ಡಾ. ತಿಮ್ಮಾಪೂರರವರ ಈ ಕೃತಿಯಲ್ಲಿ ಬಾಳೇಶರವರ ಒಟ್ಟು 153 ಕವಿತೆಗಳು, 17 ಹನಿಗವನಗಳು ಮತ್ತು 38 ಚುಟುಕುಗಳು ಇದರಲ್ಲಿವೆ. ಈ ಕೃತಿಯು ಸಹೃದಯರಿಗೆ ಆನಂದ, ಬದುಕಿನ ವಾಸ್ತವ ಸತ್ಯಗಳನ್ನು, ಲೇಖಕರ ಆ ಕಾಲದ ಸಾಮಾಜಿಕ ಪರಿಸರದ ಮೇಲೆ ಬೆಳಕಿನ ಪ್ರತಿಬಿಂಬದ ಪ್ರತೀಕವಾಗಿದೆ ಈ ಕೃತಿ. ಇಂತಹ ಕೃತಿಯನ್ನು ಸಂಪಾದನೆ ಮಾಡಿ ಕೊಟ್ಟ ಡಾ. ತಿಮ್ಮಾಪೂರರವರ ಕಾರ್ಯ ಸಿದ್ಧಿವು ಸಾರ್ಥಕವೆನಿಸಿದೆ.

ಪ್ರಬಂಧ ಪರಿಮಳ ಕೃತಿಯು ಡಾ. ತಿಮ್ಮಾಪೂರುರವರ ಪ್ರಬಂಧ ಸಂಕಲನವಾಗಿದ್ದು, ಈ ಕೃತಿಯನ್ನು 'ಕನ್ನಡ ಸಾಹಿತ್ಯ ಪರಿಷತ್ತು' ಬೆಳಗಾವಿಯಿಂದ 2010ರಲ್ಲಿ ಹೊರತಂದಿದ್ದಾರೆ. ಕನ್ನಡ ಸಾಹಿತ್ಯದ ಪ್ರಕಾರಗಳಲ್ಲಿ ಪ್ರಬಂಧವು ಯಾವುದೇ ನಿಯಮಗಳ ಬಂಧಗಳಿಗೆ ಸಿಲುಕದೇ ಸ್ವಚ್ಛಂದ ಬಂಧವಾಗಿ ಕನ್ನಡ ಸಾಹಿತ್ಯದಲ್ಲಿ ಬೆಳೆದುಬಂದಿದೆ. ಈ ಕೃತಿಯ ಕುರಿತು ಡಾ. ಬಸವರಾಜ ಜಗಜಂಪಿಯವರು ಬೆನ್ನುಡಿಯಲ್ಲಿ "ಸಂಶೋಧನ ಪ್ರಬಂಧ, ಸಂಪ್ರಬಂಧ, ಮಹಾಪ್ರಬಂಧಗಳನ್ನು ರಚಿಸಿದವರು ಬಹಳ. ಆದರೆ ಲಲಿತ ಪ್ರಬಂಧಗಳನ್ನು ರಚಿಸುವವರು ವಿರಳ. ಆಧುನಿಕತೆಯ ಧಾವಂತದಲ್ಲಿ ಓದುಗರಿಗೆ ಸಮಯವಿಲ್ಲದೆ. ಏನಿದ್ದರೂ ಸ್ವಲ್ಪದರಲ್ಲಿ ಮುಗಿಯಬೇಕು. ಇಂದಿನವರಿಗೆ ಹಾಸ್ಯ ಮತ್ತು ಲಲಿತ ಪ್ರಬಂಧಗಳೆಂದರೆ ಅತ್ಯಂತ ಅಚ್ಚುಮೆಚ್ಚು. ಅಂಥ ಪ್ರಬಂಧಗಳನ್ನು ಕಟ್ಟಿಕೊಟ್ಟು, ಆ ಕೊರತೆಯನ್ನು ನೀಗುವಲ್ಲಿ ಬೆಳಗಾವಿ ಜಿಲ್ಲೆಯ ಪ್ರಬಂಧಕಾರರು ಮಾಡಿದ ಪ್ರಯತ್ನ ಅಭಿನಂದನೀಯ. ಈ ಸಂಕಲನದ ಪ್ರಬಂಧಗಳಲ್ಲಿ ಸರಸ, ಹಾಸ್ಯ ಇದೆ, ಚಿಂತನೆ ಇದೆ. ಬದುಕನ್ನು ಬೆಳಕಿನತ್ತ ಕೊಂಡೊಯ್ಯುವ ಅಧ್ಯಾತ್ಮಿಕ ಸೆಳೆತ ಇದೆ." ಎನ್ನುತ್ತಾರೆ. ಸ್ವತ: ಲೇಖಕರೇ "ಪ್ರಸ್ತುತ ಪ್ರಬಂಧ ಪರಿಮಳ ಸಂಕಲನದಲ್ಲಿ ಇಪ್ಪತ್ತಮೂರು ಲೇಖಕರ ಲಲಿತ, ಹಾಸ್ಯ ಮತ್ತು ಚಿಂತನಪರವಾದ ಪ್ರಬಂಧಗಳಿವೆ. ವಿಸ್ಮಯಕಾರಿ ವಿಚಾರಗಳು ಸತಿ–ಪತಿಯರ ಸರಸ–ವಿರಸ, ಸಂಸ್ಕೃತಿ ಸಂಸ್ಕಾರದ ಪರಿಚಯ, ದಿನನಿತ್ಯ ವ್ಯವಹಾರದ ವೈಪರೀತ್ಯಗಳು ಮತ್ತು ಬದುಕಿನ ಸುಖ ದುಃಖಗಳು ಇಲ್ಲಿ ವ್ಯಕ್ತವಾಗಿವೆ. ಇವುಗಳಿಂದ ಪಸರಿಸುವ ಪರಿಮಳ ಓದುಗರ ಮನಸ್ಸನ್ನು ಸೆರೆಹಿಡಿಯುವಲ್ಲಿ ಯಶಸ್ವಿಯಾಗಿವೆ ಎನ್ನುತ್ತಾರೆ." ಒಟ್ಟಾರೆ ಈ ಸಂಪಾದನಾ ಕೃತಿಯಿಂದ ಸಹೃದಯನ್ನು ಡಾ. ತಿಮ್ಮಾಪೂರ ಅವರು ತಲುಪಿದ್ದಾರೆಂದು ಹೇಳಿದರೆ ತಪ್ಪಾಗಲಾರದು.

ಈ ಕೃತಿಗಳಲ್ಲದೇ ರಾಜ್ಯದ ವಿವಿಧ ವಿಶ್ವವಿದ್ಯಾಲಯಗಳ ಪದವಿ ಪಠ್ಯಕ್ರಮಕ್ಕನುಗುಣವಾಗಿ 'ಪರಿಸರ ಸಾಹಿತ್ಯ ಸಂಪದ' 'ಸಾಹಿತ್ಯ ಸಂಪದ–2' ಸಾಹಿತ್ಯ ಸಂಗಾತಿ–3 ಮತ್ತು 4 ಮುಂತಾದ ಮಂತಾದ ಕೃತಿಗಳನ್ನು ಸಾಹಿತ್ಯ ಲೋಕಕ್ಕೆ ಅರ್ಪಿಸಿದ್ದಾರೆ. ಡಾ. ತಿಮ್ಮಾಪೂರರವರು ಬಾಳೇಶ ಲಕ್ಷಟ್ಟಿಯವರು ಬರೆದ 'ಸಿದ್ವೀರಾಯಣ' ಕಾದಂಬರಿಯ ಕುರಿತು 'ಸಮಾಜ ಪ್ರತಿಬಿಂಬ: ಸಿದ್ವೀರಾಯಣ' ಎಂಬ ವಿಮರ್ಶೆ ಅದ್ಭುತವಾಗಿ ಮೂಡಿಬಂದಿದೆ.

ಡಾ. ತಿಮ್ಮಾಪೂರ ಅವರಿಗೆ ಸಾಹಿತ್ಯ ವ್ಯವಸಾಯಕ್ಕೆ ಸಂದ ಬಹುಮಾನ ಪುರಸ್ಕಾರಗಳು ಹತ್ತು ಹಲವು. ಅದರಲ್ಲಿ ಸಂಶೋಧನೆಯ ಕೃತಿಯಾದ 'ಬಯಲಾಟ ಕಥೆಗಳು: ಸಾಂಸ್ಕೃತಿಕ ಅಧ್ಯಯನ' ಕೃತಿಗೆ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡದಿಂದ 'ದಿ. ತಳಗವಾಡಿ ಸೋಮಾರಾಧ್ಯ ಸುವರ್ಣ ಪದಕ' ಮತ್ತು 'ಮುತ್ತು ಕಿತ್ತವರು' ಕೃತಿಗೆ ಬೆಳಗಾವಿ ಜಿಲ್ಲಾ ಸಾಹಿತ್ಯ ಪ್ರತಿಷ್ಠಾನದಿಂದ 'ದತ್ತಿ ಪ್ರಶಸ್ತಿ' ಪಡೆದುಕೊಂಡಿದ್ದಾರೆ. ಅಲ್ಲದೇ 2002ರಲ್ಲಿ 'ಶಿಕ್ಷಣ ಸಿರಿ– ರಾಜ್ಯ ಪ್ರಶಸ್ತಿ', 2003ರಲ್ಲಿ, 'ಸುವರ್ಣ ಶ್ರೇಷ್ಠ ಪ್ರಶಸ್ತಿ', ಮತ್ತು 2004ರಲ್ಲಿ 'ಟಿಪ್ಪುಸುಲ್ತಾನ ಶೈಕ್ಷಣಿಕ ಪ್ರಶಸ್ತಿ' ಪಡೆದಿದ್ದಾರೆ.

**ಉಪಸಂಹಾರ**

ಒಟ್ಟಾರೆ ಹೇಳುವುದಾದರೆ ವಿವಿಧ ಪ್ರಶಸ್ತಿಗಳಿಗೆ ಭಾಜನರಾಗಿ ಸಾಹಿತ್ಯ ಕ್ಷೇತ್ರದಲ್ಲಿ ತಮ್ಮದೇ ಆದ ಛಾಪನ್ನು ಮೂಡಿಸಿರುವ ಡಾ. ತಿಮ್ಮಾಪೂರ ಅವರು ಸಾಹಿತ್ಯದ ಎಲ್ಲ ಪ್ರಕಾರಗಳಲ್ಲಿ ಕೃಷಿ ಮಾಡಿದ ಖ್ಯಾತಿ ಪಡೆದಿದ್ದಾರೆ. ಇವರ ಸಾಹಿತ್ಯ ಕೃತಿಗಳು ಸಂಖ್ಯೆಯಿಂದ ಕಡಿಮೆಯಾದರೂ ಬಹಳ ಮೌಲ್ಯಯುತವಾಗಿವೆ. ಜೊತೆಗೆ ಹಲವಾರು ಸಂಘ–ಸಂಘಟನೆಗಳಿಗೆ ಅಧ್ಯಕ್ಷ, ಕಾರ್ಯದರ್ಶಿಯಾಗಿ ಸಾಹಿತ್ಯ ಚಟುವಟಿಕೆಯಲ್ಲಿ ತಮ್ಮನ್ನು ಅರ್ಪಿಸಿಕೊಂಡಿದ್ದಾರೆ.

**ಪರಾಮರ್ಶನ/ಆಕರ ಗ್ರಂಥಗಳು**


- ಹಸನಬಿ ಬೀಳಗಿ. (2001). ಜಾನಪದ ಸೃಷ್ಟಿ–ದೃಷ್ಟಿ. ಸುರಭಿ ಪ್ರಕಾಶನ, ಬಾಗಲಕೋಟೆ.
- ತಿಮ್ಮಪೂರ ಎಚ್. ಆಯ್. (ಸಂ.). (2010). ಪ್ರಬಂಧ ಪರಿಮಳ. ಕನ್ನಡ ಸಾಹಿತ್ಯ ಪರಿಷತ್ತು, ಬೆಳಗಾವಿ.
- ತಿಮ್ಮಪೂರ ಎಚ್. ಆಯ್. (ಸಂ.) (2005). ನಿರಂತರ (ಬಾಳೇಶ ಲಕ್ಷೆಟ್ಟಿ ಕಾವ್ಯ ಸಂಪುಟ). ಹಸಿರುಕ್ರಾಂತಿ ಪ್ರಕಾಶನ. ಬೆಳಗಾವಿ.
- ತಿಮ್ಮಪೂರ ಎಚ್. ಆಯ್. (ಸಂ.) (2005). ಬಯಲಾಟ ಕಥೆಗಳು: ಸಾಂಸ್ಕೃತಿಕ ಅಧ್ಯಯನ. ಸೂರ್ಯಪ್ರಕಾಶನ, ಮಲ್ಲಾಡಿಹಳ್ಳಿ.
- ತಿಮ್ಮಪೂರ ಎಚ್. ಆಯ್. (2004). ಪ್ರತಿಭಟನೆ. **ಇಲ್ಲಿ** .ಎಸ್.ಎಂ.ಹರದಗಟ್ಟಿ. (ಸಂ). ಬೆಳಗಾವಿ ಜಿಲ್ಲಾ ಕಥಾ ಸಂಕಲನ. ಕನ್ನಡ ಸಾಹಿತ್ಯ ಪರಿಷತ್ತು. ಬೆಂಗಳೂರು.
- ತಿಮ್ಮಪೂರ ಎಚ್. ಆಯ್. (ಸಂ.) (2001). ಹೃದಯ ತಂತಿ. ಜ್ಞಾನೋದಯ ಪ್ರಕಾಶನ, ಬೆಂಗಳೂರು.
- ತಿಮ್ಮಪೂರ ಎಚ್. ಆಯ್. (ಸಂ.) (2001). ಮುತ್ತು ಕಿತ್ತವರು. ಜ್ಞಾನೋದಯ ಪ್ರಕಾಶನ, ಬೆಂಗಳೂರು.
- ತಿಮ್ಮಪೂರ ಎಚ್. ಆಯ್. (ಸಂ.) (1999). ಹನಿಗಂಪು. ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ತು, ಬೆಳಗಾವಿ.
- ತಿಮ್ಮಪೂರ ಎಚ್. ಆಯ್. (ಸಂ.) (1999). ಸಣ್ಣಾಟಗಳು. ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
- ತಿಮ್ಮಪೂರ ಎಚ್. ಆಯ್. (ಸಂ.) (1993). ವೀಣೆ. ಮೋಹನ ವಿಜಯಲಕ್ಷ್ಮಿ ಆರ್ಟ ಪ್ರಿಂಟರ್ಸ. ಶೇರಿಗಲ್ಲಿ. ಬೆಳಗಾವಿ